ಕರ್ನಾಟಕ ಸರ್ಕಾರ

ಸಂಖ್ಯೆ: ಪಪೂಶಿ/ಶೈಶಾ/ಸಂ.ನಿ.ವೆ:01/2016-17

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಕ್ರಾಸ್, ಮಲ್ಲೇಶ್ವರಂ,
ಬೆಂಗಳೂರು-560012
ದಿನಾಂಕ: 19.11.2016

# ಸುತ್ತೋಲೆ

**ವಿಷಯ:** ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಜಮಾವಣೆಯಾದ ಸರ್ಕಾರೇತರ ನಿಧಿಯನ್ನು ಕಾಲೇಜಿನ ಅಭಿವೃದ್ಧಿಗೆ ಬಳಸುವ ಕುರಿತು ಸಲಹೆಗಳನ್ನು ನೀಡುವ ಬಗ್ಗೆ

**ಉಲ್ಲೇಖ:** ಸರ್ಕಾರದ ಆದೇಶ ಸಂ: ಇಡಿ 252 ಟಿಪಿಯು 2005 ದಿನಾಂಕ: 21.05.2005

ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ 03 ರೀತಿಯ ಸರ್ಕಾರೇತರ ಅಭಿವೃದ್ಧಿ ಶುಲ್ಕಗಳು ಜಮಾವಣೆಯಾಗುತ್ತವೆ.

1. ಸಂಚಿತ ನಿಧಿ
2. ದ್ವಿತೀಯ ಪಿಯುಸಿ ಖಾಸಗಿ ಅಭ್ಯರ್ಥಿಗಳಿಂದ ಪಡೆದ ಅಭಿವೃದ್ಧಿ ಶುಲ್ಕ
3. ಕಾಲೇಜು ಅಭಿವೃದ್ಧಿ ಸಮಿತಿಯ ಶುಲ್ಕ

ಉಲ್ಲೇಖಿತ ಆದೇಶದಂತೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸಂಚಿತ ನಿಧಿಯಲ್ಲಿ ಶೇಖರಣೆಯಾದ ಮೊತ್ತವನ್ನು ಈ ಕೆಳಗಿನ ಉದ್ದೇಶಗಳಿಗಾಗಿ ಬಳಸಲಾಗುತ್ತಿದೆ.

1. ವಿದ್ಯಾರ್ಥಿಗಳಿಗೆ ನೇರವಾಗಿ ಬೇಕಾಗುವ ಅಗತ್ಯ ಪೀಠೋಪಕರಣಗಳು, ಪಾಠೋಪಕರಣಗಳು ಹಾಗೂ ಪುಸ್ತಕಗಳು
2. ಪ್ರಯೋಗಾಲಯಕ್ಕೆ ಬೇಕಾಗುವ ಅಗತ್ಯ ಪೀಠೋಪಕರಣ ಹಾಗೂ ಪಾಠೋಪಕರಣಗಳು
3. ನಿರ್ದಿಷ್ಟ ಪ್ರಕರಣಗಳಲ್ಲಿ ಕಂಪ್ಯೂಟರ್ ಅಳವಡಿಕೆ
4. ಅಗತ್ಯವಾದ ಕಟ್ಟಡ ರಿಪೇರಿ ಹಾಗೂ ನಿರ್ಮಾಣ
5. ಕಾಲೇಜಿನಲ್ಲಿ ಕುಡಿಯುವ ನೀರು ಹಾಗೂ ಶೌಚಾಲಯದ ವ್ಯವಸ್ಥೆಗಾಗಿ

ಮೇಲೆ ಪ್ರಸ್ತಾಪಿಸಲಾದ ಮೂರು ರೀತಿಯ ಸರ್ಕಾರೇತರ ನಿಧಿಯನ್ನು ಬಳಸಲು ಈ ಹಿಂದೆ ನಿಗದಿಪಡಿಸಿದ 05 ಉದ್ದೇಶಗಳೊಂದಿಗೆ ಈ ಕೆಳಗಿನ ಉದ್ದೇಶಗಳನ್ನು ಸೇರ್ಪಡೆ ಮಾಡಲು ಚಿಂತಿಸಲಾಗಿದೆ.

6. ಹೆಣ್ಣುಮಕ್ಕಳ ಶುಲ್ಕ ಮರುಪಾವತಿಗಾಗಿ ತಾತ್ಕಾಲಿಕವಾಗಿ ಬಳಸುವುದು (ಸರ್ಕಾರದಿಂದ ಪಾವತಿಯಾದ ನಂತರ ಸಂಚಿತ ನಿಧಿಯ ಖಾತೆಗೆ ಮರುಭರಣ ಮಾಡುವುದು)
7. ಕ್ರೀಡಾ ಉಪಕರಣಗಳ ಖರೀದಿ
8. ಲೇಖನ ಸಾಮಗ್ರಿಗಳ ಖರೀದಿ
9. ತೋಟಗಾರಿಕಾ ಉಪಕರಣಗಳ ಖರೀದಿ
10. ಹಾಜರಾತಿಗಾಗಿ ಬಯೋಮೆಟ್ರಿಕ್ ಖರೀದಿ
11. ಕಾವಲುಗಾರರು/ಸ್ವಚ್ಛತಾಗಾರರ ಗೌರವ ಧನ ಭರಿಸಲು
12. ವಿದ್ಯುತ್ ಬಿಲ್ಲು ಪಾವತಿಸಲು

13. ಸಿ.ಸಿ.ಟಿ.ವಿ ಕ್ಯಾಮರಾ ಖರೀದಿ
14. ಸಿಸಿಟಿವಿ ಕ್ಯಾಮರಾಗಳಿಗಾಗಿ ಯುಪಿಎಸ್ ಖರೀದಿ

ಲಭ್ಯವಿರುವ ನಿಧಿಗಳ ಬಳಕೆಗೆ ಸಂಬಂಧಿಸಿದಂತೆ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಈ ಪ್ರಯುಕ್ತ ಮೇಲಿನಂತೆ ಪಟ್ಟಿ ಮಾಡಲಾದ ಉದ್ದೇಶಗಳ ಜೊತೆಗೆ ಕಾಲೇಜುಗಳ ಅವಶ್ಯಕತೆಯಂತೆ ಇನ್ನು ಯಾವುದಾದರೂ ಉದ್ದೇಶಗಳನ್ನು ಸೇರ್ಪಡೆ ಮಾಡಿಕೊಳ್ಳಬೇಕಿದ್ದಲ್ಲಿ ಈ ಕುರಿತು ಸಲಹೆಗಳನ್ನು academic.pue@gmail.com ಗೆ ದಿನಾಂಕ 23.11.2016 ರ ಒಳಗೆ ಇ ಮೇಲ್ ಮೂಲಕ ಕಳುಹಿಸುವುದು.

ನಿರ್ದೇಶಕರ ಪರವಾಗಿ
ಪದವಿ ಪೂರ್ವ ಶಿಕ್ಷಣ ಇಲಾಖೆ

**ಪ್ರತಿಯನ್ನು**

1. ನಿರ್ದೇಶಕರ ಆಪ್ತ ಶಾಖೆಗೆ –ಅವಗಾಹನೆಗೆ ಸಲ್ಲಿಸಿದೆ.
2. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರಿಗೆ – ತಮ್ಮ ಜಿಲ್ಲೆಯ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರ ಅವಗಾಹನೆಗೆ ತರಲು ತಿಳಿಸಿದೆ
3. ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರಿಗೆ – ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರ ಮೂಲಕ – ಮುಂದಿನ ಸೂಕ್ತ ಕ್ರಮಕ್ಕಾಗಿ
4. ಇ–ಗವರ್ನೆನ್ಸ್ ಶಾಖೆಗೆ – ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲು
5. ಕಛೇರಿ ಪ್ರತಿ